ನಿಮ್ಮ ಪುಟ

## ಮತದಾರರ ಜಾಗೃತಿಗಾಗಿ ಪಾದಯಾತ್ರೆ!

ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕಡ್ಡಾಯ ಮತದಾನಕ್ಕಾಗಿ, ಅದರಲ್ಲೂ ಪ್ರಾಮಾಣಿಕರನ್ನು ವಿಧಾನಸೌಧಕ್ಕೆ ಆಯ್ಕೆ ಮಾಡಿ ಕಳುಹಿಸುವ ನಿಟ್ಟಿನಲ್ಲಿ ಇಲ್ಲೊಬ್ಬ ಯುವಕ ಜಾಗೃತಿ ಮೂಡಿಸುತ್ತಿದ್ದಾರೆ. ಎಂ.ಎಸ್ಸಿ ಮತ್ತು ಎಂ.ಟೆಕ್ ಪದವೀಧರರಾದ ಬಾಗಲಕೋಟೆಯ ನಾಗರಾಜ ಕಲಗುಟಕರ ಎಂಬುವವರು ಈ ಕಾರ್ಯಕ್ಕೆ ಮುಂದಾಗಿದ್ದು, ಇವರು ಮತದಾರರಲ್ಲಿ ಅರಿವು ಮೂಡಿಸುವ ಸಲುವಾಗಿ ಬಾಗಲಕೋಟೆಯಿಂದ ಪಾದಯಾತ್ರೆ ಆರಂಭಿಸಿದ್ದಾರೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಇವರ ಪಾದಯಾತ್ರೆ ಸಾಗಲಿದ್ದು, ದಾರಿ ಮಧ್ಯೆ ಸಿಗುವ ಎಲ್ಲ ಜನರಲ್ಲಿ ಮತದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಸ್ವಚ್ಛ ವಿಧಾನಸಭೆಯ ಕುರಿತು, ಕಡ್ಡಾಯ ಮತದಾನದ ಕುರಿತು ನಾಮಫಲಕವನ್ನು ಕೊರಳಿಗೆ ನೇತು ಹಾಕಿಕೊಂಡು, ಧ್ವನಿವರ್ಧಕದ ಜಾಗೃತಿಯ ಗೀತೆಗಳನ್ನು ಹಾಕಿ ಅರಿವು ಮೂಡಿಸುತ್ತಿದ್ದಾರೆ. ಕೊರಳಿಗೆ ನೇತು ಹಾಕಿಕೊಂಡಿರುವ ನಾಮಫಲಕದಲ್ಲಿ ನನ್ನ ಮತ ಮಾರಾಟಕ್ಕಿಲ್ಲ ಎನ್ನುವ ಒಕ್ಕಣೆ ಇರುವುದು ವಿಶೇಷವಾಗಿದೆ.

—ಈರಣ್ಣ ಬೆಂಗಾಲಿ, ರಾಯಚೂರು




## ರಸ್ತೆ ಮಧ್ಯೆ ತೆಂಗಿನಮರ

ಬೆಂಗಳೂರಿನ ಬಿಟಿಎಂ ಲೇಔಟ್‌ನ ರಸ್ತೆಯೊಂದರ ಮಧ್ಯದಲ್ಲಿ ತೆಂಗಿನಮರವು ಡಿವೈಡರ್ ಆಗಿ ನಿಂತಿರುವುದು ಅಚ್ಚರಿ ಮೂಡಿಸುತ್ತದೆ. ಹೇಳಿ ಕೇಳಿ ಬಿಟಿಎಂ ಲೇಔಟ್ ಹೆಚ್ಚು ಜನಸಂಖ್ಯೆಯುಳ್ಳ ಪ್ರದೇಶ. ಇಂತಹ ಪ್ರದೇಶದಲ್ಲಿ ಸಹಜವಾಗಿಯೇ ವಾಹನ ದಟ್ಟಣೆ ಇರುತ್ತದೆ. ವಾಹನ ದಟ್ಟಣೆ ಇದ್ದರೂ ರಸ್ತೆ ಮಧ್ಯದಲ್ಲಿರುವ ತೆಂಗಿನಮರ ತೆರವಿಗೆ ಬಿಬಿಎಂಪಿ ಮುಂದಾಗದೆ ಅದನ್ನು ಹಾಗೆಯೇ ಉಳಿಸಿಕೊಂಡಿರುವುದು ನಿಜಕ್ಕೂ ಶ್ಲಾಘನೀಯ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ



## ಬಿಸಿಲು ನಾಡಿಗೆ ಬಂದ ಹಸಿರು ಪಾರಿವಾಳ

ಪ್ರೀತಿಶಾಂತಿಯ ಸಂಕೇತವಾಗಿ ಜನಪ್ರಿಯವಾಗಿರುವ ಪಾರಿವಾಳ ಬಹುತೇಕರಿಗೆ ಪರಿಚಿತ ಹಕ್ಕಿ. ಆದರೆ ಹಸಿರು ಪಾರಿವಾಳ (Yellow footed green pigeon) ಮಲೆನಾಡಿನಲ್ಲಿ ಮಾತ್ರ ಹೆಚ್ಚು ಪರಿಚಿತ ಹಕ್ಕಿಯಾಗಿದೆ. ನೋಡಲು ಸಾಮಾನ್ಯ ಪಾರಿವಾಳಗಳಂತೆ ಕಂಡರೂ ಇದು ತುಸು ವಿಶೇಷ ಹಾಗೂ ವಿಭಿನ್ನವಾಗಿದೆ. ಹೆಸರೇ ಹೇಳುವಂತೆ ಹಸಿರು ಬಣ್ಣದ ಗರಿಗಳನ್ನು ಪ್ರಧಾನವಾಗಿ ಹೊಂದಿರುವ ಹಕ್ಕಿ ಇದಾಗಿದ್ದು, ತಿಳಿನೇರಳೆ ಹಳದಿ ಕಾಲುಗಳನ್ನು ಹೊಂದಿದೆ. ಗಿಡಮರಗಳ ಹಣ್ಣುಗಳು ಇದರ ಪ್ರಮುಖ ಆಹಾರ. ಸದಾ ಗುಂಪು ಗುಂಪಾಗಿ ಹಾರುವ ಈ ಪಕ್ಷಿಗಳು ನೆಲಕ್ಕಿಳಿಯುವುದು ನೀರು ಕುಡಿಯಲು ಮಾತ್ರ. ಉಳಿದಂತೆ ಅತ್ಯಂತ ನಾಚಿಕೆಜೀವಿಗಳಾದ ಇವು ಮನುಷ್ಯರ ಸಾಮೀಪ್ಯವನ್ನು ಎಂದಿಗೂ ಸಹಿಸುವುದಿಲ್ಲ. ಸಿಳ್ಳೆಹೊಡೆಯುವ ಮೂಲಕ ಪರಸ್ಪರ ಸಂವಹನ ಮಾಡಿಕೊಳ್ಳುವ ಇವುಗಳಿಗೆ ಯಥಾಪ್ರಕಾರ ಮನುಷ್ಯನೇ ವೈರಿ. ಇದು ಕಾಡು ಹಣ್ಣುಗಳನ್ನು ಮಾತ್ರ ತಿಂದು ಜೀರ್ಣಿಸಿಕೊಳ್ಳಬಲ್ಲ ಜೀವಿಯಾದ್ದರಿಂದ ಇದಕ್ಕೆ ಯಥೇಚ್ಛವಾಗಿ ಕಾಡಿನ ಮರಗಳು ಬೇಕು.



ಮಲೆನಾಡಿನ ಕಾಡುಗಳಲ್ಲಿ ಮಾತ್ರ ಕಂಡು ಬರುತ್ತಿದ್ದ ಪಕ್ಷಿಗಳು ಇಂದು ಬಿಸಿಲುನಾಡಿನಲ್ಲೂ ಕಂಡುಬರಲು ಕಾರಣ ಮಲೆನಾಡಿನಲ್ಲಿ ಕ್ಷೀಣಿಸುತ್ತಿರುವ ಮರಗಳ ಸಂಖ್ಯೆ. ಪ್ರತಿ ವರ್ಷ ನಮ್ಮೂರಿಗೆ (ಬಾಚಿಗೊಂಡನಹಳ್ಳಿ) ಆಂತರಿಕ ವಲಸೆ ಬರುವ ಈ ರೆಕ್ಕೆಮಿತ್ರರಿಗೆ ಇಲ್ಲಿಯ ಮರಗಳು ಹಣ್ಣುಬಿಟ್ಟಿರುವ ಸುದ್ದಿಯನ್ನು ಮುಟ್ಟಿಸಿದವರಾರು? ಎಂದು ಅಚ್ಚರಿಯಾಗುತ್ತದೆ. ಕಣ್ಣಿಗೆ ಬಿದ್ದ ಹಸಿರು ಪಾರಿವಾಳವೊಂದು ಗಾಯಗೊಂಡು ನೆಲಕ್ಕುರುಳಿದ್ದನ್ನು ಕಂಡು ಮನಸಿಗೆ ಬೇಜಾರಾಯಿತು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ



## ಸ್ಪೈಡರ್‌ಮ್ಯಾನ್ ಕಂಬಳಿಹುಳ!

ಇಂಗ್ಲಿಷ್‌ನ ಪ್ರಖ್ಯಾತ ಸಿನಿಮಾವಾದ ಸ್ಪೈಡರ್‌ಮ್ಯಾನ್, ಬ್ಯಾಟ್‌ಮ್ಯಾನ್ ಗೊತ್ತಲ್ಲ! ಇವರದ್ದೇ ವಂಶದ ಹೊಸ ಅತಿಥಿಯೊಬ್ಬ ನಮ್ಮ ಮನೆಗೆ ಬಂದಿದ್ದ. ಇವನ ಹೆಸರು ಕಂಬ್ಳಿಮ್ಯಾನ್! ಮನೆಯ ಗೋಡೆಯ ಮೇಲೆ ಅಚಾನಕ್ಕಾಗಿ ನೋಡಿದಾಗ ಇದ್ಯಾರಪ್ಪ ಕೂಲಿಂಗ್ ಗ್ಲಾಸ್ ತೊಟ್ಟು ಗುರಾಯಿಸುತ್ತಿರುವುದು ಅನ್ನಿಸಿತು. ಹತ್ತಿರ ಹೋಗಿ ನೋಡಿದಾಗ ರೋಮವೆಲ್ಲ ಸೆಟೆದು ನಿಂತವು. ಯಾಕೆಂದರೆ ಇದು ಕಂಬಳಿಹುಳದ ಒಂದು ಜಾತಿ ಅನ್ನಿಸಿತು. ಮೈ ಪೂರ್ತಿ ಕಪ್ಪು ಸೋಘಾದ ಹಾಗೆ ಕಂಡರೆ, ಮುಖದಲ್ಲಿನ ಕಪ್ಪು ಪಟ್ಟಿ ಸ್ಪೈಡರ್‌ಮ್ಯಾನ್‌ನಂತೆ ಕಾಣಿಸಿತು. ಫೋಟೊ ತೆಗೆಯುತ್ತೇನೆ ಎಂದು ಕ್ಯಾಮೆರಾ ಹಿಡಿದಾಗ ಅದು ಹಿಂತಿರುಗಿ ಪೋಸು ಕೊಟ್ಟದ್ದು ಹೀಗೆ...



—ಶ್ರಿಯಾ ಪಂಡಿತ್, ಗಾವಳಿ